ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	(೨೬೦) ೨೨೧೯
ಸದಸ್ಯರ ಹೆಸರು	:	ಶ್ರೀ ಶ್ರೀರಾಮರೆಡ್ಡಿ ಜಿ.ವಿ. (ಚಾಗೇಪಲ್ಲಿ)
ಉತ್ತರಿಸುವ ಸಚಿವರು	:	ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಕ್ರ.ಸಂ. ಪ್ರಶ್ನೆ

ಅ) ವಿದ್ಯುತ್ ಬಲ್ಬುಗಳನ್ನು ಪಾವತಿ ಮಾಡಿಲ್ಲವೆಂಬ ನೆಪದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಸುಟ್ಟು ಹೋಗುವ ಟ್ರಾನ್ಸ್ ಫಾರ್ಮರ್‌ಗಳನ್ನು ದುರಸ್ತಿಪಡಿಸುವಲ್ಲಿ ವಿಳಂಬವಾಗುತ್ತಿದ್ದು, ಅದರಿಂದ ಕುಡಿಯುವ ನೀರಿನ ಸರಬರಾಜಿಗೂ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಉತ್ತರ

ಅ) ವಿದ್ಯುತ್ ಬಲ್ಬುಗಳನ್ನು ಪಾವತಿಸಿಲ್ಲ ಎಂಬ ನೆಪದಿಂದ ಗ್ರಾಮೀಣ ಪ್ರದೇಶದಲ್ಲಿ ವಿಫಲವಾಗಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸುವಲ್ಲಿ ವಿದ್ಯುತ್ ಸರಬರಾಜು ಕಂಪನಿಗಳು ವಿಳಂಬ ಮಾಡುತ್ತಿಲ್ಲ, ಆದಷ್ಟೂ ಶೀಘ್ರವಾಗಿ ಅನಗತ್ಯ ವಿಳಂಬವಿಲ್ಲದೇ ಸುಟ್ಟು ಹೋದ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸಲಾಗುತ್ತಿದೆ. ಕುಡಿಯುವ ನೀರಿನ ಸರಬರಾಜಿಗಾಗಿಯೇ ಅಳವಡಿಸಲಾಗಿರುವ ಟ್ರಾನ್ಸ್‌ಫಾರ್ಮರ್‌ಗಳು ವಿಫಲವಾದಲ್ಲಿ ಅವುಗಳನ್ನು ಮೊದಲ ಆದ್ಯತೆಯ ಮೇರೆಗೆ ಬದಲಾಯಿಸಲಾಗುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ಬಳಕೆಯಿಂದ ವಿದ್ಯುತ್ ಪರಿವರ್ತಕಗಳು ಓವರ್‌ಲೋಡ್ ಆಗಿ, ಇವುಗಳ ವಿಫಲಗೊಳ್ಳುವಿಕೆಗೆ ಮುಖ್ಯ ಕಾರಣವಾಗಿರುತ್ತದೆ.

ಕಳೆದ ಸಾಲಿನಲ್ಲಿ (೨೦೦೩-೦೪) ಏಪ್ರಿಲ್-೦೩ ರಿಂದ ಫೆಬ್ರವರಿ-೦೪ ರವರೆಗೆ ಒಟ್ಟು ೨೫.೫೪೨ ವಿಫಲಗೊಂಡ ಟ್ರಾನ್ಸ್‌ಫಾರ್ಮರ್‌ಗಳನ್ನು ವಿದ್ಯುತ್ ಸರಬರಾಜು ಕಂಪನಿಗಳು ಬದಲಾಯಿಸಿವೆ. ಪ್ರಸಕ್ತ ಸಾಲಿನಲ್ಲಿ (೨೦೦೪-೦೫) ಇದೇ ಅವಧಿಯಲ್ಲಿ ಒಟ್ಟು ೩೦,೩೯೭ ವಿಫಲಗೊಂಡ ಟ್ರಾನ್ಸ್‌ಫಾರ್ಮರ್‌ಗಳನ್ನು

ವಿದ್ಯುತ್ ಸರಬರಾಜು ಕಂಪನಿಗಳು ಬದಲಾಯಿಸಿರುತ್ತವೆ. ಅಲ್ಲದೇ, ವಿಫಲಗೊಂಡ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿಗಾಗಿ ೩೩ ಟ್ರಾನ್ಸ್‌ಫಾರ್ಮರ್ ದುರಸ್ತಿ ಕೇಂದ್ರಗಳು ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿವೆ. ಪ್ರತಿ ತಿಂಗಳು ಸರಾಸರಿ ೨,೭೮೫ ಟ್ರಾನ್ಸ್‌ಫಾರ್ಮರ್‌ಗಳು ವಿಫಲಗೊಳ್ಳುತ್ತಿದ್ದು, ಪ್ರತೀ ತಿಂಗಳು ಸರಾಸರಿಯಾಗಿ ೨,೭೬೫ ವಿಫಲಗೊಂಡ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸಲಾಗುತ್ತಿದೆ.

ಇತ್ತೀಚಿನ ಮಾಹಿತಿಗಳ ಪ್ರಕಾರ ದಾಸ್ತಾನಿನಲ್ಲಿರುವ ಟ್ರಾನ್ಸ್‌ಫಾರ್ಮರ್‌ಗಳ ವಿದ್ಯುತ್ ಸರಬರಾಜು ಕಂಪನಿವಾರು ವಿವರಗಳು ಕೆಳಕಂಡಂತಿದೆ.

೧)	ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ	೧,೨೩೧
೨)	ಮಂಗಳೂರು ವಿದ್ಯುತ್ ಸರಬರಾಜು ಕಂಪನಿ	೧,೯೬೭
೩)	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ	೧೩೬
೪)	ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ	೧೫೪
	ಒಟ್ಟು	**೩,೪೮೮**

ಕ್ರ.ಸಂ.	ಪ್ರಶ್ನೆ
೪)	ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಳ್ಳುವ ಕ್ರಮವೇನು?
	ಉತ್ತರ
೪)	ಸರ್ಕಾರವು ವಿಫಲಗೊಂಡ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿಗಾಗಿಯೇ ಪ್ರಸಕ್ತ ವರ್ಷದಲ್ಲಿ ೬೦ ಕೋಟಿ ರೂ.ಗಳನ್ನು ಬಿಡುಗಡೆ ಮಾಡಿರುತ್ತದೆ. ವಿದ್ಯುತ್ ಸರಬರಾಜು ಕಂಪನಿವಾರು ಹಂಚಿಕೆಯ ವಿವರಗಳು ಈ ಕೆಳಕಂಡಂತಿದೆ.

(ರೂ. ಕೋಟಿಗಳಲ್ಲಿ)

೧.	ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ	೧೦.೦೦
೨.	ಮಂಗಳೂರು ವಿದ್ಯುತ್ ಸರಬರಾಜು ಕಂಪನಿ	೨೦.೦೦
೩.	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ	೧೦.೦೦
೪.	ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ	೨೦.೦೦
	ಒಟ್ಟು	೬೦.೦೦

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಮುಖ್ಯವಾಗಿ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟುಹೋದಂಥ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಬೇಗನೇ ಕ್ರಮ ತೆಗೆದುಕೊಳ್ಳುತ್ತಿಲ್ಲ. ಕ್ರಮ ತೆಗೆದುಕೊಳ್ಳಿ ಎಂದು ಹೇಳಿದಾಗ ಹಣ ಪಾವತಿಯಾಗಿಲ್ಲವೆಂದು ಹೇಳುತ್ತಾರೆ. ಇದರ ಜೊತೆಗೆ ಕುಡಿಯುವ ನೀರಿನ ಟ್ರಾನ್ಸ್‌ಫಾರ್ಮರ್ ಮತ್ತು ವ್ಯವಸಾಯದ್ದು ಎರಡೂ ಜಾಯಿಂಟ್ ಆಗಿದೆ. ಹಳ್ಳಿಯವರು ಟ್ರಾನ್ಸ್‌ಫಾರ್ಮರ್ ಚಾರ್ಜನ್ನು ಕೊಟ್ಟಿಲ್ಲವೆಂದು ಅದನ್ನು ರಿಪೇರಿ ಮಾಡಲಿಲ್ಲವೆಂದರೆ ಇಡೀ ಊರಿಗೆ ಕುಡಿಯಲು ನೀರಿಲ್ಲದಿರುವ ಪರಿಸ್ಥಿತಿಯಾಗಿದೆ. ಇದು ಬಹಳ ಗಂಭೀರವಾಗಿದೆ. ಇದರ ಬಗ್ಗೆ ಸದನದಲ್ಲಿ ಎರಡುಮೂರು ಸಲ ಪ್ರಸ್ತಾಪ ಮಾಡಿದ್ದೇವೆ. ತಾವೂ ಕೂಡ ಎರಡು ಮೂರು ಸಲ ಕುಡಿಯುವ ನೀರಿಗೆ ತೊಂದರೆಯಾಗದಂತೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಿರಿ. ಆದರೆ, ಇದು ಸತತವಾಗಿ ಮುಂದುವರಿಯುತ್ತಲೇ ಇದೆ. ಇವತ್ತು ಕೂಡ ನನ್ನ ಕ್ಷೇತ್ರದಲ್ಲೇ ಸುಮಾರು ಕಡೆ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟುಹೋಗಿದೆ, ವ್ಯವಸಾಯಕ್ಕೆ ಸಂಬಂಧಪಟ್ಟಿದ್ದನ್ನು ಬೈಫರ್ಕೆಟ್ ಮಾಡಿ ೨೫ ಕೆ.ವಿ.ಯನ್ನು ವಾಟರ್ ಸಪ್ಲೈಗೆ ಸಪರೇಟ್ ಆಗಿ ಹಾಕಿ ಎಂದು ಒಂದು ತಿಂಗಳಿನಿಂದ ಹೇಳುತ್ತಿದ್ದರೂ ಅದನ್ನು ಕೂಡ ಮಾಡುತ್ತಿಲ್ಲ. ನನ್ನ ಕ್ಷೇತ್ರದ ಒಂದನ್ನು ಉದಾಹರಣೆ ಹೇಳಿದೆ, ರಾಜ್ಯದ ಎಲ್ಲಾ ಕಡೆ ಇದೇ ಪರಿಸ್ಥಿತಿಯಾಗಿದೆ. ಟ್ರಾನ್ಸ್‌ಫಾರ್ಮರ್ ಕೆಟ್ಟುಹೋಗಿರುವ ಬಗ್ಗೆ ಸಹ ತಾವು ಹೇಳಿದ್ದೀರಿ. ಇದರ ದುರಸ್ತಿಗಾಗಿ ೬೦ ಕೋಟಿ ರೂಪಾಯಿಗಳನ್ನು ತಾವು ತೆಗೆದಿಟ್ಟೀದ್ದಿರಿ. ಅದನ್ನು ಪ್ರೈವೇಟ್ ಕಂಪನಿಯವರಿಗೆ ಕೊಟ್ಟಿದ್ದೀರಿ. ೩೦,೩೯೭ ಟ್ರಾನ್ಸ್‌ಫಾರ್ಮರ್‌ಗಳು ಇಡೀ ರಾಜ್ಯದಲ್ಲಿ ಸುಟ್ಟುಹೋಗಿವೆಯೆಂಬ ಮಾಹಿತಿಯನ್ನು ಕೊಟ್ಟಿದ್ದೀರಿ. ಇದರ ರಿಪೇರಿಗಾಗಿ ೬೦ ಕೋಟಿ ಹಣವನ್ನು ತೆಗೆದಿಟ್ಟೀದ್ದೀರಿ. ೩೦,೩೯೭ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟುಹೋಗಿದ್ದರೆ ಒಂದು ಟ್ರಾನ್ಸ್‌ಫಾರ್ಮರ್ ರಿಪೇರಿ ಮಾಡಲು ಎಷ್ಟು ಹಣಬೇಕು. ಈ ೬೦ ಕೋಟಿ ರೂಪಾಯಿಗಳಲ್ಲಿ ಕೆಟ್ಟುಹೋಗಿರುವ ಎಲ್ಲಾ ಟ್ರಾನ್ಸ್‌ಫಾರ್ಮರ್‌ಗಳನ್ನು ರಿಪೇರಿ ಮಾಡಲು ಸಾಧ್ಯವಿದೆಯೆ?

ಶ್ರೀ ಹೆಚ್.ಡಿ. ರೇವಣ್ಣ : ರಾಜ್ಯದಲ್ಲಿ ಸುಮಾರು ಎರಡು ಲಕ್ಷದ ಹತ್ತು ಸಾವಿರ ಟ್ರಾನ್ಸ್‌ಫಾರ್ಮರ್‌ಗಳು ಇದೆ. ಅದರಲ್ಲಿ ನಾವು ಈ ವರ್ಷ ಸುಮಾರು ೩೦,೬೨೬ ಟ್ರಾನ್ಸ್‌ಫಾರ್ಮರ್‌ಗಳನ್ನು ರಿಪೇರಿ ಮಾಡಿದ್ದೇವೆ.

ಅಧ್ಯಕ್ಷರು: ತಾವು ಯಾವ ಪ್ರಶ್ನೆಯನ್ನು ಕೇಳಿದಿರಿ? ತಾವು ಪ್ರಶ್ನೆಯ ಸಂಖ್ಯೆ ೨೩೦ಲನ್ನು ಕೇಳಬೇಕಾಗಿತ್ತು. ತಡೆಹಿಡಿಯಲಾದ ಪ್ರಶ್ನೆಯ ಸಂಖ್ಯೆ: ೨೩೦ಲನ್ನು ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರು ಕಾರ್ಮಿಕ ಮತ್ತು ಹಜ್ ಸಚಿವರಿಗೆ ಕೇಳಬೇಕಾಗಿತ್ತು.

ಶ್ರೀ ಹೆಚ್.ಡಿ.ರೇವಣ್ಣ: ಉತ್ತರವನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು : ಇಲ್ಲ, ಅದನ್ನು ಇನ್ನೊಂದು ಸಲ ತೆಗೆದುಕೊಳ್ಳೋಣ.

ಅಧ್ಯಕ್ಷರು : ಈಗ ನಾನು ಕರೆದಿರುವ ಪ್ರಶ್ನೆಯ ಬಗ್ಗೆ ತೆಗೆದುಕೊಳ್ಳೋಣ. ಕೈಗಾರಿಕೆಯ ಲಾಕೌಟ್‌ನ ಬಗ್ಗೆ ಯಾವುದೋ ಪ್ರಶ್ನೆ ಕೇಳುವುದು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ಇನ್ನೊಂದು ಪ್ರಶ್ನೆ ಇದೆ.

ಅಧ್ಯಕ್ಷರು : ನಾನು ಅಜೆಂಡಾ ಪ್ರಕಾರ ಹೋಗುತ್ತಿದ್ದೇನೆ. ಅದರ ಪ್ರಕಾರ ತಡೆಹಿಡಿಯಲಾದ ಪ್ರಶ್ನೆಯಲ್ಲಿ ತಮ್ಮ ಹೆಸರಿನಲ್ಲಿ ಪ್ರಶ್ನೆಯ ಸಂಖ್ಯೆ : ೨೩೦ಲನೇ ಪ್ರಶ್ನೆ ಇದೆ. ಇದನ್ನು ಮೊದಲು ಕೇಳಿ. ಅನಂತರ ಅದನ್ನು ಕೇಳುವಿರಂತೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನನಗೆ ಅದರ ಬಗ್ಗೆ ಉತ್ತರ ಬಂದಿಲ್ಲ.

ಅಧ್ಯಕ್ಷರು : ಉತ್ತರ ಬಂದಿಲ್ಲವೆಂದೇನು ಇಲ್ಲವಲ್ಲಾ ? ಕಾರ್ಮಿಕ ಸಚಿವರು .....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದಕ್ಕೆ ಉತ್ತರ ಬಂದಿಲ್ಲವೆಂದು ನಾನು ಕೇಳಿಲ್ಲ. ಈಗ ಉತ್ತರವನ್ನು ಕೊಡುತ್ತಿದ್ದಾರೆ. ಈಗ ಉತ್ತರ ನನ್ನ ಹತ್ತಿರ ಬರುತ್ತಿದೆ. ಪಟ್ಟಿಯಲ್ಲಿ ಪ್ರಶ್ನೆ ಇದೆ. ಆದರೆ, ಉತ್ತರವಿಲ್ಲ.

ಅಧ್ಯಕ್ಷರು : ಅದನ್ನು ಅಧಿಕಾರಿಗಳು ಮೊದಲೇ ಕೊಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ತಡೆಹಿಡಿಯಲಾದ ಪ್ರಶ್ನೆಗೆ ನೀವು ನನಗೆ ಉತ್ತರವನ್ನು ಕೊಟ್ಟಿಲ್ಲ. ನೀವು ಅದರಲ್ಲಿ ಎಲ್ಲವನ್ನೂ ಮಿಕ್ಸ್‌ಮಾಡಿಬಿಟ್ಟಿದ್ದೀರ ಅಷ್ಟೆ. ಅನಂತರ ತಡೆಹಿಡಿಯಲಾದ ಪ್ರಶ್ನೆಗೆ ಎಂದು ಹೇಳಲಿಲ್ಲ.